# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ,

**ಎಂ.ಇ.ಐ.ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು -560073.**

ಸಂಖ್ಯೆ:ಕಾ.ಪಾ.ಅ(ಯೋಜನೆ)/ಟೆಂಡರ್/ 05/2017-18

ಕಾರ್ಯಪಾಲಕ ಅಭಿಯಂತರವರ ಕಛೇರಿ
ಯೋಜನಾ ವಿಭಾಗ,
ದಿನಾಂಕ:21-09-2017

### ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಎನ್ಐಟಿ)
### (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಯೋಜನೆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು ಆಯುಕ್ತರು ಬಿಬಿಎಂಪಿ, ಇವರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಕಾಯ್ದೆ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯದ ಸಹಾಯ ಕೇಂದ್ರಗಳು, ಕಛೇರಿಗಳಿಗೆ ಅಗತ್ಯವಿರುವ ಹೊರಸಂಪನ್ಮೂಲ ಅಧಾರಿತ ಭದ್ರತಾ ಸಿಬ್ಬಂದಿ ಸೇವೆಯನ್ನು ಒದಗಿಸಲು ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಲಾದ ನೊಂದಾಯಿತ ಹೊರಸಂಪನ್ಮೂಲ ಏಜೆನ್ಸಿಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಪದ್ದತಿ ಮೂಲಕ ಸೇವಾ ಶುಲ್ಕ ಶೇಕಡವಾರು ದರ ಟೆಂಡರ್ ಆಹ್ವಾನಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ಕಾಮಗಾರಿ ಹೆಸರು | ಅಂದಾಜು ಮೊತ್ತ | ಇ.ಎಂ.ಡಿ ಮೊತ್ತ ರೂ ಗಳಲ್ಲಿ | ಕಾಮಗಾರಿಯ ಅವಧಿ |
|---|---|---|---|---|
| 1 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಾಸರಹಳ್ಳಿ ವಲಯಕ್ಕೆ ಒಳಪಡುವ ಸಹಾಯ ಕೇಂದ್ರಗಳು, ಕಛೇರಿಗಳಿಗೆ ಭದ್ರತಾ ಸಿಬ್ಬಂದಿಗಳನ್ನು ಒದಗಿಸುವುದು | 49.50 ಲಕ್ಷಗಳು | 99000/- | 9 ತಿಂಗಳುಗಳು |

1. **ವೇಳಾ ಪಟ್ಟಿ :**
   a) ಟೆಂಡರ್ ದಾಖಲೆಗಳು ಈ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದೊರೆಯುವ ದಿನಾಂಕ:23-09-2017 ರಿಂದ.
   b) ಟೆಂಡರ್ ಅಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ:-28-09-2017 ಸಂಜೆ:4:30 ಗಂಟೆವರೆಗೆ
   c) ಪೂರ್ವಭಾವಿ ಸಭೆಯ ದಿನಾಂಕ:03-10-2017 ಮಧ್ಯಾಹ್ನ:3:30 ಗಂಟೆಗೆ.
   d) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ:10-10-2017 ಸಂಜೆ:4:00 ಗಂಟೆವರೆಗೆ.
   e) ಬಿಡ್ ಅನ್ನು ತೆರೆಯುವ ದಿನಾಂಕ:12-10-2017, ಸಂಜೆ:4.00 ಗಂಟೆಗೆ.

2. ಕರ್ತವ್ಯ ನಿರ್ವಹಿಸಬೇಕಾದ ಸ್ಥಳ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯ ವ್ಯಾಪ್ತಿ ಪ್ರದೇಶಗಳಲ್ಲಿ.

ಪು.ತಿ.ನೋ

3. ಸದರಿ ಕಾಮಗಾರಿಗಳಿಗೆ ನಿಗದಿ ಪಡಿಸಲಾಗಿರುವ ಇ.ಎಂ.ಡಿ ಮೊತ್ತವನ್ನು ಇ-ಪ್ರೊಕ್ಯೂರ್‌ಮೆಂಟ್ ನಿಯಾಮಾವಳಿಗಳಂತೆ ಸಲ್ಲಿಸಿಸುವುದು. ಸದರಿ ಮೊತ್ತಕ್ಕೆ ಯಾವುದೇ ಬಡ್ಡಿ ನೀಡಲಾಗುವುದಿಲ್ಲ.

4. ಟೆಂಡರ್ ಅವಧಿಯು ಕಾರ್ಯದೇಶ ನೀಡಿದ ದಿನಾಂಕದಿಂದ 9 ತಿಂಗಳ ಕಾಲಾವಧಿವರೆಗೆ ಅಥವಾ ಮುಂದಿನ ಆದೇಶದವರೆವಿಗೂ ಇರುತ್ತದೆ. ಈ ಅವಧಿಯಲ್ಲಿ ನಿಗಧಿಪಡಿಸಿದ ದರಗಳಿಗೆ ಸೇವಾ ಶುಲ್ಕವನ್ನು ಮಾತ್ರ ನಮೂದಿಸತಕ್ಕದ್ದು. ಸೇವಾ ಶುಲ್ಕವು ಸೊನ್ನೆ ಎಂದು ನಮೂದಿಸಬಾರದು. ಸೊನ್ನೆ ನಮೂದಿಸಿದರೆ ಟೆಂಡರ್ ಅರ್ಜಿಯನ್ನು ತಿರಸ್ಕರಿಸಲಾಗುವುದು.

5. ಟೆಂಡರ್‌ದಾರರು ಆದಾಯ ತೆರಿಗೆಯ PAN, TAN, ವೃತ್ತಿ ತೆರಿಗೆ, GST ಇತ್ಯಾದಿ ನೊಂದಣಿ ಸಂಖ್ಯೆಗಳನ್ನು ತಪ್ಪದೇ ಅರ್ಜಿಯಲ್ಲಿ ನಮೂದಿಸಿ ಸಂಬಂಧಿಸಿದ ದಾಖಲೆಗಳ ದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸುವುದು.

6. ಯಾವುದೇ ಮಾಹಿತಿಯನ್ನು ನೀಡದೆ ಕೆ.ಟಿ.ಪಿ.ಪಿ. ಅಧಿನಿಯಮ 1999 ಪ್ಯಾರ 14 ಮತ್ತು 15 ರಂತೆ ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಟೆಂಡರ್ ಆಹ್ವಾನ ಪ್ರಾಧಿಕಾರ ಹೊಂದಿರುತ್ತದೆ.

7. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಿಂದ ಪಡೆದು ಕೊಳ್ಳಬಹುದು.

ಸಹಿ/-
**ಕಾರ್ಯಪಾಲಕ ಅಭಿಯಂತರರು**
ಯೋಜನಾ ವಿಭಾಗ
ದಾಸರಹಳ್ಳಿ ವಲಯ,
ಬಿಬಿಎಂಪಿ, ಬೆಂಗಳೂರು

**ಪ್ರತಿಯನ್ನು:**

1) ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತ ಕಾರ್ಯಲಯಕ್ಕೆ ಕಳುಹಿಸಿದೆ.
2) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ. ಬೆಂಗಳೂರು ರವರಿಗೆ ಮಾಹಿಗಾಗಿ ಕಳುಹಿಸಿದೆ.
3) ಪ್ರಧಾನ ಅಭಿಯಂತರರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯಲಯಕ್ಕೆ ಕಳುಹಿಸಿದೆ.
4) ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ, ಬಿಬಿಎಂಪಿ. ಬೆಂಗಳೂರು ರವರಿಗೆ ಮಾಹಿಗಾಗಿ ಕಳುಹಿಸಿದೆ.
5) ಮಾಹಿತಿ ತಂತ್ರಜ್ಞಾನ ಸಲಹೆಗಾರರು ರವರಿಗೆ ಸಲ್ಲಿಸುತ್ತಾ ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
6) ಜಿಲ್ಲಾ ಟೆಂಡರ್ ಬುಲೆಟಿನ್ ಅಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು ಬೆಂಗಳೂರು. ರವರಿಗೆ ಸಲ್ಲಿಸುತ್ತಾ ರಾಜ್ಯ ಟೆಂಡರ್ ಬುಲೆಟಿನ್ ನಲ್ಲಿ ಪ್ರಕಟಣೆ ಹೊರಡಿಸಲು ಕೋರಿದೆ.
7) ಸಾರ್ವಜನಿಕ ಸಂಪರ್ಕಾಧಿಕಾರಿ ಬಿಬಿಎಂಪಿ ರವರಿಗೆ ಸಲ್ಲಿಸುತ್ತಾ ಆಂಗ್ಲ ಮತ್ತು ಕನ್ನಡ ದಿನ ಪತ್ರಿಕೆ ಗಳಲ್ಲಿ ಪ್ರಕಟಿಸಲು ಕೋರಿದೆ.
8) ಕಛೇರಿ ಪ್ರತಿ.

**ಕಾರ್ಯಪಾಲಕ ಅಭಿಯಂತರರು**
ಯೋಜನಾ ವಿಭಾಗ
ದಾಸರಹಳ್ಳಿ ವಲಯ,
ಬಿಬಿಎಂಪಿ, ಬೆಂಗಳೂರು